**ಸಾಕ್ಷಿಯನ್ನು ದಿಃ 16.06.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ವಿ ಎಸ್ ವಕೀಲರಿಂದಃ-**

ನನ್ನ ಹಾಗೂ ನನ್ನ ಮಕ್ಕಳ ನಡುವೆ ಯಾವುದೇ ಭಿನ್ನಾಭಿಪ್ರಾಯ, ಮನಸ್ತಾಪ ಇಲ್ಲ . ನನ್ನ ಮಕ್ಕಳು ಬೆಂಗಳೂರಿನಲ್ಲಿ ವಾಸ ಮಾಡುತ್ತಾರೆ . ನನ್ನ ಮಕ್ಕಳು ಬೆಂಗಳೂರಿನಲ್ಲಿ ಸುಮಾರು 10 ವರ್ಷಗಳ ಮೇಲ್ಪಟ್ಟು ವಾಸ ಇದ್ದಾರೆ . ನನ್ನ ಮಕ್ಕಳಲ್ಲಿ ಹಿರಿಯ ಮಗ ಹರೀಶ್ ಆತ ಬಿಇ ಪದವಿ ದರ , ಮಗಳು ಎಂ ಬಿ ಎ ಸ್ನಾತಕೋತ್ತರ ಪದವಿದರೆ . ನನ್ನ ಮಗ ಹಾಗೂ ಮಗಳು ಇಬ್ಬರು ಅವರವರ ಸಂಸಾರದೊಂದಿಗೆ ಪ್ರತ್ಯೇಕವಾಗಿ ವಾಸ ಇದ್ದಾರೆ . ನನ್ನ ಮಕ್ಕಳು ನನಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದಿಲ್ಲ . ನನ್ನ ಮಕ್ಕಳು ನನಗೆ ಗೊತ್ತಿಲ್ಲದ ರೀತಿ ಯಾವುದೇ ವ್ಯವಹಾರ ಮಾಡುವುದಿಲ್ಲ . ಇದುವರೆಗೆ ನನ್ನ ಮಕ್ಕಳು ನನ್ನ ವಿರುದ್ಧವಾಗಿ ಹಾಗೂ ನನಗೆ ಗೊತ್ತಿಲ್ಲದ ರೀತಿ ಯಾವುದೇ ಕೆಲಸ ಮಾಡಿಲ್ಲ . ಆ ರೀತಿ ಮಾಡಿದ್ದರೆ ಅದು ನನಗೆ ಚೆನ್ನಾಗಿ ನೆನಪಿನಲ್ಲಿ ಇರುತ್ತಿತ್ತು ಎಂದರೆ ಸರಿ .

ನ್ಯಾಯಾಲಯದಿಂದ ನೋಟೀಸ್ ಬಂದ ನಂತರ ಏನು ದಾವೆ ಸಲ್ಲಿಸಿದ್ದಾರೆ ಎಂಬ ವಿಚಾರವನ್ನು ತಿಳಿದುಕೊಂಡು ಲಿಖಿತ ಹೇಳಿಕೆ ಹಾಕಿಸಿರುತ್ತೇನೆ . ನಾನು ಈ ದಾವೆಯಲ್ಲಿ ಲಿಖಿತ ಹೇಳಿಕೆ ಹಾಕುವ ಸಮಯದಲ್ಲಿ ಹಾಗೂ ಹಾಕಿದ ನಂತರ ವಾದಿಯವರು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾರೆ ಎಂದು ಸಲ್ಲಿಸಿದ್ದಾರೆ ಎಂದು ನಾನು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿಲ್ಲ . ಹಾಗೇನಾದರೂ ಸುಳ್ಳು ದಾಖಲೆ ಕಂಡು ಬಂದಿದ್ದರೆ ದೂರು ಕೊಡುತ್ತಿದ್ದೆ ಎಂದರೆ ಸಾಕ್ಷಿ ಆ ರೀತಿ ಯಾವುದೇ ದಾಖಲೆ ಕಂಡು ಬಂದಿಲ್ಲ ಎನ್ನುತ್ತಾರೆ.

ನನ್ನ ಒಡಹುಟ್ಟಿದವರು ಹಾಗೂ ಅಕ್ಕ ತಂಗಿಯರ ನಡುವೆ ಯಾವುದೇ ದ್ವೇಷ ಅಸೂಯೇ ಇರುವುದಿಲ್ಲ. ನನಗೆ ಚುತಿ ಬರುವಂತೆ ನನ್ನ ಸಹೋದರ ಸಹೋದರಿಯರು ಹೇಳಿಕೆ ಕೊಡುವಂತಹ ಸಂಗತಿ ಇರುವುದಿಲ್ಲ . 7 ನೇ ಪ್ರತಿವಾದಿ ನನ್ನ ಮಗ . 8 ನೇ ಪ್ರತಿವಾದಿ ನನ್ನ ಮಗಳು . 7 ಮತ್ತು 8 ನೇ ಪ್ರತಿವಾದಿಗಳು ನನ್ನ ಮಗ ಮತ್ತು ಮಗಳು ಎಂದರೆ ಸರಿ . ನಿಪಿ.28 ಪ್ರತ್ತುತ್ತರ ನೋಟೀನಲ್ಲಿ ನಮೂದಿಸಿರುವ ಸಿ ಹರೀಶ

ಮತ್ತು ಸಿ ಸುಧಾ ರವರು ನನ್ನ ಮಕ್ಕಳು . ನಿಪಿ.28 ಪ್ರತ್ಯುತ್ತರ ನೋಟೀಸನ್ನು ಕೊಡಲು ನನ್ನ ಮಗ ಹಾಗೂ ಮಗಳು ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ .

ವಾದಿಯವರು ಹಾಕಿರುವ ದಾಖಲೆಗಳ ಬಗ್ಗೆ ಇದುವರೆಗೂ ನಾನು ತಿಳಿದುಕೊಂಡಿರುವುದಿಲ್ಲ . ತಿಳಿದುಕೊಳ್ಳಲು ತೊಂದರೆ ಇರಲಿಲ್ಲ . ಸದರಿ ನಿಪಿ.28 ರ ಪ್ರತ್ಯುತ್ತರವನ್ನು ನೀಡಿರುವ ವಕೀಲರ ವಿರುದ್ಧ ಸ್ಟೇಟ್ ಬಾರ್ ಕೌಂಸಿಲಿನಲ್ಲಿ ದೂರು ಸಲ್ಲಿಸಿರುವುದಿಲ್ಲ . ಈಗ ನನ್ನ ಕೇಸನ್ನು ನಡೆಸುತ್ತಿರುವ ಸಂಪೂರ್ಣ ಹೆಸರು ಗೊತ್ತು. ಅವರ ಹೆಸರು ಬಿ ಈಶಾ . ಸದರಿಯವರು ಈ ಹಿಂದೆ ಯಾರ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತು . ಸಾಕ್ಷಿ ಪುನಃ ನುಡಿಯುತ್ತಾ ಯೋಗನಂದಾ ವಕೀಲರ ಕಛೇರಿಯಲ್ಲಿ ಕೆಲಸ ಮಾಡುತ್ತಿರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ .

ಪ್ರತಿವಾದಿ 2 ರಿಂದ 5 ರವರ ಪ್ರತಿವಾದಿ ಪತ್ರ ಹಾಗೂ ಲಿಖಿತ ಹೇಳಿಕೆಯನ್ನು ಬಿ ಈಶ ವಕೀಲರೇ ಹಾಕಿರುತ್ತಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ . ನಿಪಿ.28 ರ ಪ್ರಕಾರ ಪ್ರತ್ಯುತ್ತರ ಕೊಟ್ಟ ಬಗ್ಗೆ ಲಿಖಿತ ಹೇಳಿಕೆಯಲ್ಲಿ ಉಲ್ಲೇಖಿಸಿರುತ್ತಾರೆ ಎಂದರೆ ಇರಬಹುದು ಎನ್ನುತ್ತಾರೆ . ನಾನು ಈ ದಾವೆಯಲ್ಲಿ ಲಿಖಿತ ತಕರಾರನ್ನು ಹಾಕಿದ್ದು , ಸದರಿ ಲಿಖಿತ ತಕರಾರನ್ನು 2 ರಿಂದ 5 ನೇ ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿದ ನಂತರ ಯೋಚಿಸಿ ಅದಕ್ಕೆ ವ್ಯತಿರಿಕ್ತವಾಗಿ ಮಾಹಿತಿ ನೀಡಿ ಲಿಖಿತ ಹೇಳಿಕೆ ಸಲ್ಲಿಸಿರುತ್ತೇನೆ ಎಂದರೆ ಸರಿ .

2014 ರ ನವೆಂಬರ್ 30 ರಂದು ನಾನು ನಿವೃತ್ತನಾಗಿದ್ದೆ . ದಿಃ 19.08.2014 ರಲ್ಲಿ ನಾನು ಕರ್ತವ್ಯದಲ್ಲಿ ಇದ್ದೆ . ನನ್ನ ಕಛೇರಿಯಲ್ಲಿ ನನಗೆ ಆಗದೇ ಇರುವವರು ಇರಲಿಲ್ಲ . ರಿಜಿಸ್ಟರ್ ಪೋಸ್ಟ್ ಬಂದರೆ ಅಂಚೆ ಕಛೇರಿಯ ಸೀಲನ್ನು ಯಾರು ಸೃಷ್ಠಿಸಿಕೊಳ್ಳಲು ಆಗುವುದಿಲ್ಲ . ನಿಪಿ.10 ಅಂಚೆ ಸ್ವೀಕೃತಿಯಲ್ಲಿನ ವಿಳಾಸ ನನ್ನದೇ ಇರುತ್ತದೆ . ಸದರಿ ವಿಳಾಸಕ್ಕೆ ಬಂದ ನೋಟೀಸ್ ತಲುಪಿರುತ್ತದೆ ಎಂದರೆ ಸರಿ . ಹಾಗೇ ಬಂದಿಲ್ಲ ಎಂದು ಹೇಳುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿ . 1 ನೇ ಪ್ರತಿವಾದಿ ಬೆಟ್ಟಮ್ಮನ ಆದಿಯಾಗಿ ಎಲ್ಲಾ ಪ್ರತಿವಾದಿಗಳು ಸೇರಿ ವಾದಿ ಮಂಜುಳಾ ರವರಿಗೆ ಅಗ್ರಿಮೆಂಟ್ ಬರೆದುಕೊಟ್ಟಿದ್ದೆವು ಎಂದರೆ ಸರಿಯಲ್ಲ . ನಿಪಿ.1 ರಲ್ಲಿ ನನ್ನ ಸಹಿ ಇದೆ ಎಂದರೆ ಸರಿ .

ದಿಃ 07.05.2014 ರಂದು ನಿಪಿ.1 ಅಗ್ರಿಮೆಂಟ್ ಗೆ 3 ಲಕ್ಷ 50 ಸಾವಿರ ಪಡೆದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಸಾಕ್ಷಿ ಪುನಃ 1 ವರ್ಷದ ಬೋಗ್ಯಕ್ಕೆ ಎಂದು ಹೇಳಿ ದಾಖಲೆಗೆ ಸಹಿ ಪಡೆದು ಯಾವುದೇ ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ . ನಿಪಿ.1 ರ ಅಗ್ರಿಮೆಂಟ್ ಪ್ರಕಾರ ಸಬ್ ರಿಜಿಸ್ಟರ್ ಕಛೇರಿಗೆ ಬಂದು ನಾನು ರಿಜಿಸ್ಟರ್ ಮಾಡಿಸಿಕೊಟ್ಟಿಲ್ಲ ಎಂದರೆ ಸುಳ್ಳು. ಆ ದಿನ ಬೆಟ್ಟಮ್ಮನ ಎಲ್ಲಾ ವರಸುದಾರರು ಸಬ್ ರಿಜಿಸ್ಟರ್ ಕಛೇರಿಗೆ ಬಂದಿದ್ದರು ಎಂದರೆ ಸರಿಯಲ್ಲ . ಆ ದಿನ ನಾನು ಸಲೀಸಾಗಿ ಆಗುತ್ತಿದ್ದಂತಹ ಕೆಲಸವನ್ನು ಹಾಳು ಮಾಡಿದ್ದೇನೆ ಎಂದರೆ ಸರಿಯಲ್ಲ . ಅಗ್ರಿಮೆಂಟ್ ಪ್ರಕಾರ ಮುಂಗಡ ಹಣವನ್ನು ವಾದಿ ಎಲ್ಲರಿಗೂ ಕೊಟ್ಟಿದ್ದರು ಎಂದರೆ ಸುಳ್ಳು . ರಿಜಿಸ್ಟರ್ ಆಗದೇ ಇದ್ದ ಕಾರಣ ಬೆಟ್ಟಮ್ಮನ ಆದಿಯಾಗಿ ಎಲ್ಲಾ ವಾರಸುದಾರರಿಗೂ ವಾದಿಯವರು ನೋಟೀಸ್ ಕೊಡಿಸಿದ್ದರು ಎಂದರೆ ಸುಳ್ಳು .

ಪ್ರತಿವಾದಿ 2 ರಿಂದ 8 ಶ್ರೀ ಯೋಗನಂದ ವಕೀಲರ ಮೂಲಕ ಪ್ರತ್ಯುತ್ತರ ಕೊಡಿಸಿದ್ದರು ಎಂದರೆ ಸುಳ್ಳು. ಸದರಿ ಪ್ರತ್ಯುತ್ತರದಲ್ಲಿ ಅಗ್ರಿಮೆಂಟ್ ಆಗಿರುವುದನ್ನು ಒಪ್ಪಿಕೊಂಡು ಮುಂಗಡ ಹಣ ಕೊಟ್ಟಿರುವುದು ಸುಳ್ಳು ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ . ನಾನು ಮುಂದೆ ಬಂದು ದಾಖಲೆಯನ್ನು ನೊಂದಣಿ ಮಾಡಿಸಿಕೊಳ್ಳದ ಕಾರಣ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸುಳ್ಳು . ನಾನು ಹಾಗೂ ಈ ದಾವೆಯ ಎಲ್ಲಾ ಪ್ರತಿವಾದಿಗಳು ನಮಗೆ ಎಷ್ಟು ಹಣ ಬರಬೇಕೋ ಅದನ್ನು ಹಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ . ಸದರಿ ನಿಪಿ.1 ಅಗ್ರಿಮೆಂಟನ್ನು ಹುಣಸೂರು ವಕೀಲರಾದ ಎನ್ ಡಿ ಸಂದೀಪ್ ಸಮಕ್ಷಮದಲ್ಲಿ ಬರೆದ ಪತ್ರ ಎಂದರೆ ದಾಖಲೆ ಪ್ರಕಾರ ಹೌದು ಎನ್ನುತ್ತಾರೆ . ಸಾಕ್ಷಿ ಮುಂದುವರೆದು ಸದರಿ ದಾಖಲೆಯು ಅಗ್ರಿಮೆಂಟ್ ಅಲ್ಲ ಬೋಗ್ಯ ಪತ್ರ ಎಂದು ಹೇಳಿ ಯಾರಿಗೂ ಓದಲು ಬಿಡದೆ ಸಹಿ ಹಾಕಿಸಿಕೊಂಡಿರುತ್ತಾರೆ ಎನ್ನುತ್ತಾರೆ . ವಾದಿಯವರು ಹಾಗೂ ದಾಖಲೆ ಬರೆದ ವಕೀಲರು ಸಮಾನ ಉದ್ದೇಶದಿಂದ ಮಾಹಿತಿ ಯನ್ನು ಮರೆಮಾಚಿ ಮೋಸ ಮಾಡಿ ದಾಖಲೆ ಬರೆಸಿಕೊಂಡಿದ್ದಾರೆ ಎಂದು ಇದುವರೆಗೂ ದೂರು ನೀಡಿಲ್ಲ . ಹಾಗೆ ದೂರು ಕೊಡಲು ಕಾನುನು ರೀತಿ ಕ್ರಮ ಜರುಗಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ .

ನನ್ನ ಮಾತಿಗೆ ಒಳಪಟ್ಟು 2 ರಿಂದ 5 ಪ್ರತಿವಾದಿಗಳು ನ್ಯಾಯಾಲಯಕ್ಕೆ ಬಂದು ವಿಚಾರಣೆ ಹೇಳಿಲ್ಲ ಎಂದರೆ ಸರಿಯಲ್ಲ . ಅವರು ಸಲ್ಲಿಸಿರುವ ಹೇಳಿಕೆಗಳನ್ನು ಲಿಖಿತ ಹೇಳಿಕೆಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂದು

ನ್ಯಾಯಾಲಯಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ . ನಾನು ವಾದಿಗಳಿಗೆ ತೊಂದರೆ ಕೊಡಬೇಕೆಂದು ವಾದಿಗೆ ವಿನಾಕಾರಣ ಅಲೆಸಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ.1 ರಲ್ಲಿನ ದಾವಾ ಸ್ವತ್ತು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ . ಹಾಗಾಗಿ ನಿಪಿ.1 ಕ್ಕೆ ಎಲ್ಲಾ ಪಕ್ಷಗಾರರ ಬಳಿ ಸಹಿ ಪಡೆಯಲಾಗಿದೆ ಎಂದರೆ ಸಾಕ್ಷಿಯು ಸಹಿ ಹಾಕಿರುವುದು ಸರಿ , ಆದರೆ ಬೋಗ್ಯ ಪತ್ರ ಎಂದು ಹೇಳಿ ಸಹಿ ಪಡೆದಿರುತ್ತಾರೆ ಎನ್ನುತ್ತಾರೆ . ಹಾಗೇನಾದರು ಬೋಗ್ಯ ಪತ್ರ ಎಂದು ಸುಳ್ಳು ಹೇಳಿ ಸಹಿ ಪಡೆದಿದ್ದರೆ , 2 ರಿಂದ 5 ನೇ ಪ್ರತಿವಾದಿಗಳು ಒಪ್ಪಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿ ಸರಿ ಎಂದು ನುಡಿದು ನಂತರ ಸುಳ್ಳು ಎಂದು ನುಡಿಯುತ್ತಾರೆ .

ನಾನು ನಿಪಿ.1 ರಂತೆ ಅಗ್ರಿಮೆಂಟನ್ನು ಬರೆದುಕೊಟ್ಟಿದ್ದರು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನನ್ನ ಲಿಖಿತ ಹೇಳಿಕೆಯಲ್ಲಿ ಅಗ್ರಿಮೆಂಟನ್ನು ಬರೆದುಕೊಟ್ಟಿಲ್ಲ ಬೋಗ್ಯ ಪತ್ರ ಎಂದು ಹೇಳಿದ್ದು , ಒಂದು ವೇಳೆ ಬೋಗ್ಯ ಪತ್ರ ಬರೆದುಕೊಟ್ಟಿದ್ದರು ಬೋಗ್ಯದ ಮೊತ್ತವನ್ನು ಯಾವಾಗ ಹಿಂದಿರುಗಿಸಬೇಕು ಎಂದು ದಿನಾಂಕ ನಮೂದು ಮಾಡಿಲ್ಲ ಆದರೆ ಅವರು ಯಾವುದೇ ಹಣವನ್ನು ಕೊಟ್ಟಿರಲಿಲ್ಲ ಎನ್ನುತ್ತಾರೆ. ಬೋಗ್ಯ ಪತ್ರ ಬರೆದುಕೊಟ್ಟಿದ್ದರೇ ಸ್ವಾಧೀನ ಕೂಡ ಬರೆದುಕೊಡಬೇಕಾಗಿತ್ತು ಆದರೆ ಸ್ವಾಧೀನ ಕೊಟ್ಟಿಲ್ಲ ದಾಖಲೆಗೆ ಸಹಿ ಮಾಡಿದ್ದೆವು ಎನ್ನುತ್ತಾರೆ .

ಈ ದಾವೆಯ ತೀರ್ಪು ಏನಾಗುತ್ತದೋ ಎಂದು ತಿಳಿದು ಮುಂದಾಲೋಚನೆಯಿಂದ ಕೆಳಗಿನ ನ್ಯಾಯಾಲಯದಲ್ಲಿ ಮತ್ತೊಂದು ದಾವೆಯನ್ನು ಹಾಕಲಾಗಿದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದು , ವಾದಿ ನನ್ನ ತಂಗಿ , ತಾಯಿಯ ಬಳಿ ಮೋಸ ಮಾಡಿ ದಾನ ಪತ್ರ ಮಾಡಿಸಿಕೊಂಡು ಹೀಗೆ ಸುಳ್ಳು ದಾಖಲೆಗಳನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ . ಹೀಗೆ ಹೇಳಿದ್ದನ್ನು ಪ್ರಥಮವಾಗಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ , ಮೊದಲು ಹೇಳಿಲ್ಲ ಎಂದರೆ ಗೊತ್ತಾದ ನಂತರ ಹೇಳುತ್ತಿದ್ದೇನೆ ಎನ್ನುತ್ತಾರೆ . ಹೀಗ 1-2 ವರ್ಷ ದ ಹಿಂದೆ ಅವರ ಹೆಸರಿಗೆ ಬಂದಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ . ಹೀಗೆ ಪ್ರತಿ ಯೊಂದು ಪ್ರಶ್ನೆಗೂ ಸಂಬಂಧ ಪಡದ ಅಸಂಬಧ ಉತ್ತರ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ .

ವಾದಿ ನನ್ನ ತಂಗಿ ಹಾಕಿರುವ ದಾವೆಯ ಖರ್ಚಿನ ಸಮೇತ ಪರಿಹಾರ ಕೊಡಬೇಕು ಎಂದು ದಾವೆ ಹಾಕಿರುತ್ತಾರೆ ಎಂದರೆ ಸುಳ್ಳು . ನಾನು ಹೇಳಿದಂತೆ ಯಾವುದೇ ಬೋಗ್ಯ ಪತ್ರ ಬರೆದುಕೊಟ್ಟಿಲ್ಲ ,

ಬರೆದುಕೊಟ್ಟಿರುವುದು ಅಗ್ರಿಮೆಂಟ್ ಎಂದರೆ ಸರಿಯಲ್ಲ . ನಿಪಿ.1ರಲ್ಲಿ ಕೇವಲ ಅಗ್ರಿಮೆಂಟಿನ ಒಕ್ಕಣೆ ಇರುತ್ತದೆಯೇ ಹೊರತು ಬೋಗ್ಯದ ಒಕ್ಕಣೆ ಇಲ್ಲ ಎಂದರೆ ಸರಿಯಲ್ಲ . ನನಗೆ ನಿಪಿ.1 ಬೋಗ್ಯದ ಪತ್ರ ಅಲ್ಲ ಅಗ್ರಿಮೆಂಟ್ ಎಂದು ಗೊತ್ತಿದ್ದರೂ ಉದ್ದೇಶ ಪೂರಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅದರಲ್ಲಿ ಇರುವ ವಿಚಾರಗಳನ್ನು ತಿಳಿದುಕೊಂಡು ಸಹಿ ಮಾಡಿದ್ದರು ಸಹ ಉದ್ದೇಶ ಪೂರಕವಾಗಿ ಓದಲು ಕೊಟ್ಟಿಲ್ಲ , ಓದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಯಾವ ಸ್ಥಳದಲ್ಲಿ ಇದ್ದೆನೋ ಅಲ್ಲಿಗೇ ನೋಟೀಸ್ ಬಂದಿದ್ದರು , ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ದಾಖೆಯ ಪ್ರಕಾರ ಇವತ್ತಿಗೂ ಬಾಕಿ ಹಣ ತಮ್ಮಲ್ಲೇ ಇಟ್ಟುಕೊಂಡು ಪತ್ರ ಬರೆಸಿಕೊಳ್ಳಲು ತಯಾರಿರುತ್ತಾರೆ ಎಂದರೆ ಸುಳ್ಳು .

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿರುತ್ತಾರೆ, ಆದರೆ ಈಗಾಗಲೆ ಎಲ್ಲಾ ವಿಷಯಗಳು ಪಾಟಿ ಸವಾಲು ಮಾಡಿದ್ದು , ಕೋರಿಕೆಯನ್ನು ತಿರಸ್ಕರಿಸಿ ಪಾಟಿ ಸವಾಲನ್ನು ಮುಕ್ತಾಯಗೊಳಿಸಲಾಗುತ್ತದೆ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.